ಪ್ರಾಮಾಣಿಕವಾದ ಕಾಳಜಿ, ನೋವು ಅಲ್ಲಿದೆ).

ದೇವದತ್ತ ಪಟ್ಟನಾಯಕ (ಇವರ ಹೆಸರೇ ಎಷ್ಟು ಫ್ಯೂಡಲ್! ಆದರೆ ಅದನ್ನು ಪ್ರಯತ್ನಪೂರ್ವಕವಾಗಿ ಮೀರುವ ತಮ್ಮ ನಿಲುವಿನಿಂದಾಗಿ ಇವರನ್ನು ಪಟ್ಟನಾಯಕರೆಂದು ಒಪ್ಪಬಹುದೇನೋ!) ಅವರ ಈ ಕೃತಿಯ ಮಹತ್ವ ಎಲ್ಲಿದೆಯೆಂದರೆ, ರಾಮಾಯಣವನ್ನು ಸೀತಾಯಣವಾಗಿ ಪ್ರತಿಪಾದಿಸಲು ಬೇಕಾದ ಬೌದ್ಧಿಕ, ತಾತ್ವಿಕ ತಯಾರಿಯಲ್ಲಿ. ನಿರಾಕರಿಸಲು ಸಾಧ್ಯವಾಗದ ಸಿದ್ಧತೆಯಲ್ಲಿ ಅವರು ಸೀತೆಯನ್ನು ಹೊಸ ಬೆಳಕಿನಲ್ಲಿ ಕಾಣಿಸಲು ಯತ್ನಿಸಿದ್ದಾರೆ. ಇದರ ಜೊತೆಗೇ ಅವರು ರಾಮಾಯಣದಂತಹ ಮಹಾಕಾವ್ಯಕ್ಕೆ ಇರುವ ಇತರ ಆಯಾಮಗಳನ್ನೂ ಅಷ್ಟೇ ಗಂಭೀರವಾಗಿ ಚರ್ಚಿಸುತ್ತಾರೆ. ರಾಮಾಯಣದ ಸ್ತ್ರೀವಾದಿ ಓದಿಗೆ ಇವು ಪೂರಕವಾಗಿ ಬಂದಿರುವುದು ಕೃತಿಯ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ.

'ಜಯ' ಮತ್ತು 'ಸೀತಾ' ಎರಡೂ ಕೃತಿಗಳಲ್ಲಿ ದೇವದತ್ತರು ನಮ್ಮ ಗಮನ ಸೆಳೆಯುವುದು ಒಂದು ಮುಖ್ಯ ಕಾರಣದಿಂದ. ಈ ತನಕದ ಪಠ್ಯಗಳ ಓದು 'ಗಂಡೋದು' ಎನ್ನುವುದರ, ಅದರ ಮಿತಿಯ, ಅದರ ಕ್ರೌರ್ಯದ ಅರಿವು ಇವರ ಬರವಣಿಗೆಗೆ ಪ್ರಾಮಾಣಿಕತೆಯ ಧಾತುವನ್ನು ಒದಗಿಸಿದೆ. ಗಂಡಾಳಿಕೆಯ ಪ್ರತಿಫಲನವೇ ಆ ಪಠ್ಯಗಳ ರಾಚನಿಕತೆಯನ್ನು, ಮೂಲಕೇಂದ್ರಗಳನ್ನು ನಿರ್ಧರಿಸಿದೆ ಮತ್ತು ನಿರ್ದೇಶಿಸಿದೆ ಎನ್ನುವ ಅರಿವು ಕೃತಿಯುದ್ದಕ್ಕೂ ತಪ್ಪೊಪ್ಪಿಗೆಯ ಮತ್ತು ಅದನ್ನು ತಿದ್ದುವ ಮಾನವೀಯ ಪ್ರಯತ್ನವಾಗಿ ಫಲ ಕೊಟ್ಟಿದೆ. ಇದು ಎಷ್ಟು ಶಕ್ತವಾಗಿದೆ ಎಂದರೆ, ಇದು ಹೆಣ್ಣಿನ ಬಿಡುಗಡೆಯ ಪ್ರಯಾಣ ಮಾತ್ರವಲ್ಲ, ಗಂಡಿನ ಬಿಡುಗಡೆಯ ಪ್ರಯಾಣವೂ ಹೌದು ಎನ್ನುವ ಸತ್ಯ ಮತ್ತು ಸಾಧ್ಯತೆಯನ್ನು ತೋರಿಸಿಕೊಡುತ್ತದೆ. ಗಂಡು ತನ್ನ ಅಕಾರಣ ಅಹಂಕಾರದ ಬಂಧನದಿಂದ ಹೊರ ಬಂದು ಮಾನವೀಯವಾಗುವ ಸತ್ಯದ ನವದರ್ಶನದ ಹಂಬಲ ಈ ಕೃತಿಗಿದೆ. ಇದರ ಮಿತಿಗಳು, ಸೋಲುಗಳು, ತೊಡಕುಗಳು ಏನೇ ಇರಲಿ ಇದರ ಆಶಯವೇ ಇದನ್ನೊಂದು ಪ್ರಾಮಾಣಿಕ ಕೃತಿಯಾಗಿಸಿದೆ.

ಆರಂಭದಲ್ಲಿ ಇದನ್ನೊಂದು ಸಾಂಸ್ಕೃತಿಕ ಮತ್ತು ರಾಜಕೀಯ ಪಠ್ಯವೆಂದು ಗುರುತಿಸಿದೆ. ಸಾಹಿತ್ಯಕ ಪಠ್ಯಗಳನ್ನು ಅವುಗಳ ಸೌಂದರ್ಯ ಮೀಮಾಂಸೆಯಿಂದ ಹೊರತಂದು ಅವುಗಳ ಸಾಮಾಜಿಕ ಮತ್ತು ರಾಜಕೀಯ ಉತ್ತರದಾಯಿತ್ವವನ್ನು ಮೌಲ್ಯವಾಗಿಸುತ್ತಿರುವ ಕಾಲಘಟ್ಟ ಇದು. ದಮನಿತರ ಪಾಲಿಗೆ ಈ ಬಗೆಯ ಪ್ರಯತ್ನಗಳೂ ಅವರ ಹೋರಾಟದ ಮುಖ್ಯ ಭಾಗಗಳಾಗಿವೆ. ಸೀತೆಯನ್ನು ಶೋಷಿತಳೆಂದು, ದಮನಿತಳೆಂದು ಗುರುತಿಸುತ್ತಲೇ ಅದನ್ನು ಪ್ರತಿರೋಧಿಸುವ ಶಕ್ತಿಯೂ ಅವಳಿಗಿತ್ತು, ಅವಳು ಆ ಪ್ರಯತ್ನಗಳನ್ನು ಮಾಡಿಯೂ ಮಾಡಿದಳು ಎನ್ನುವ ಅಂಶಗಳನ್ನು ಎತ್ತಿ ಹಿಡಿಯುವ ಮೂಲಕ ಹೆಣ್ಣಿನ ಹೋರಾಟದ ಪರಂಪರೆಯ ನಾಯಕಿಯಾಗಿ ಸೀತೆಯನ್ನು ಸ್ಥಾಪಿಸಲು ಈ ಕೃತಿ ಉದ್ದೇಶಿಸಿದೆ. ಅರಮನೆಯಿಂದ ಕಾಡಿಗೂ ಕಾಡಿನಿಂದ ಅಪಹರಣಕ್ಕೂ ಅಪಹರಣದಿಂದ ಅಗ್ನಿಪರೀಕ್ಷೆಯ ಅವಮಾನಕ್ಕೂ ಅವಮಾನದಿಂದ ತಿರಸ್ಕಾರಕ್ಕೂ ಒಳಗಾಗುವ ಸೀತೆಯ ಬದುಕಿನ ಪ್ರಯಾಣವು ಅವಳದೇ ಕಣ್ಣಿನಿಂದ ನೋಡಿದಾಗ, ಅವಳು ತನ್ನನ್ನು, ತನ್ನ ಅಸ್ಮಿತೆಯನ್ನು, ಆತ್ಮಗೌರವವನ್ನು ನಿಧಾನಕ್ಕೆ ಕಂಡುಕೊಳ್ಳುವ, ಅದನ್ನು ಉಳಿಸಿಕೊಳ್ಳಲು ನಡೆಸಿದ ನಿಶ್ಶಬ್ದ ಕಾರ್ಯಕರ್ತೆಯಂತೆ ಕಾಣಿಸತೊಡಗುತ್ತಾಳೆ. ಬೇಟೆಯನ್ನು, ಶೂರ್ಪನಖಿಯ ಅಂಗ ಛೇದನವನ್ನು ವಿರೋಧಿಸುವ ಮೂಲಕ ತನ್ನ ಆಯ್ಕೆಯನ್ನು, ಭಿನ್ನಾಭಿಪ್ರಾಯವನ್ನು ಮಾತ್ರ ಹೇಳುತ್ತಿಲ್ಲ, ಹೆಣ್ಣಿನ ಜೀವಪರ ನಿಲುವುಗಳನ್ನೂ ಎತ್ತಿ ಹಿಡಿಯುತ್ತಾಳೆ. ಬದುಕಿನ ಆರಂಭದಿಂದಲೂ 'ಅನ್ಯ'ವೆನಿಸುವ, 'ಪರಕೀಯ'ವೆನಿಸುವ ಸಂದರ್ಭ ಮತ್ತು ಬೆಳವಣಿಗೆಗಳನ್ನು ಸೀತೆ 'ತನ್ನ'ದಾಗಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಹೋಗುತ್ತಾಳೆ. ಅದು ಜನಕನನ್ನು ತಂದೆಯಾಗಿ ಸ್ವೀಕರಿಸುವ ಸಂದರ್ಭವೇ ಇರಬಹುದು,